ಕೊಳ್ಳೇಗಾಲ ತಾಲ್ಲೂಕಿನ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ

೧೧೬೭. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ೧೯೭೮-೭೯ ರಿಂದ ೧೯೮೭-೮೮ ರವರೆಗೆ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳೆಷ್ಟು ;

ಆ) ಇವುಗಳಿಗಾಗಿ ಖರ್ಚು ಮಾಡಿರುವ ಮೊಬಲಗೆಷ್ಟು ?

ಇ) ಇದರಿಂದ ನೀರಾವರಿ ಸೌಲಭ್ಯಕ್ಕೆ ಒಳಪಟ್ಟಿರುವ ಪ್ರದೇಶವೆಷ್ಟು ?

ಈ) ನಿಗದಿತ ನೀರಾವರಿ ಸೌಲಭ್ಯದ ಗುರಿ ಸಾಧಿಸಲು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯ ಕಾಮಗಾರಿಗಳು.

ಆ) ರೂ. ೯೬೪.೦೭೭ ಲಕ್ಷಗಳು

ಇ) ೩೪೮೬ ಹೆಕ್ಟೇರುಗಳು (ಉದ್ದೇಶಿತ)

ಈ) ಅಪೂರ್ಣಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಅತಿ ಜಾಗ್ರತೆ ಪೂರ್ಣಗೊಳಿಸಲು ಅನುದಾನಕ್ಕೆ ಅನುಗುಣವಾಗಿ ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಈಚಲಕಂಟೆ ಕೆರೆ ಮುಚ್ಚುವ ಬಗ್ಗೆ.

೧೧೭೮. ಶ್ರೀ ಜಿ. ಕೆ. ವೆಂಕಟಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕೋಲಾರ ಜಿಲ್ಲೆ ಶ್ರೀನಿವಾಸಪುರದ ಈಚಲಕ್ರಂಟೆಯನ್ನು ಮುಚ್ಚುವ ಬಗ್ಗೆ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಮುಚ್ಚುವ ಕೆಲಸ ಯಾವ ಹಂತದಲ್ಲಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ. (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿದೆ.

ಅಂತರ ರಾಜ್ಯ ಸಾರಿಗೆ ಬಸ್ಸುಗಳ ಸಂಖ್ಯೆ

೧೧೮೧. ಶ್ರೀ ಜಿ. ಕೆ. ವೆಂಕಟ ಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ನೆರೆ ರಾಜ್ಯಗಳಿಗೆ ಓಡಿಸುತ್ತಿರುವ ಅಂತರ ರಾಜ್ಯ ಸಾರಿಗೆ ಬಸ್ಸು (ಮಾರ್ಗವಾರು ಮಾಹಿತಿಯೊಡನೆ) ಮತ್ತು ಬೇರೆ ರಾಜ್ಯದಿಂದ ಕರ್ನಾಟಕಕ್ಕೆ ಓಡಿಸುತ್ತಿರುವ ಬಸ್ಸುಗಳ ಒಟ್ಟು ಸಂಖ್ಯೆ ಎಷ್ಟು ? (ರಾಜ್ಯವಾರು ಮಾಹಿತಿಯನ್ನು ಕೊಡುವುದು)

ಆ) ಹಾಗಿದ್ದಲ್ಲಿ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಇತರ ರಾಜ್ಯಗಳಿಗೆ ಅಂತರ ರಾಜ್ಯ ಸಾರಿಗೆಗಳನ್ನು ಹೆಚ್ಚಿಸುವ ಪ್ರಸ್ತಾವನೆಗಳೇನಾದರೂ ಇದೆಯೇ?

ಶ್ರೀ ಕೆ. ಜೆ. ಜಾರ್ಜ್. (ಸಾರಿಗೆ ರಾಜ್ಯ ಸಚಿವರು).—

ಅ) ಅಂತರ ರಾಜ್ಯ ಸಾರಿಗೆ ಒಪ್ಪಂದಗಳನ್ವಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೯೦ಳ ಬಸ್ಸುಗಳನ್ನು ನೆರೆ ರಾಜ್ಯಗಳಿಗೂ ಅದೇ ರೀತಿ ನೆರೆ ರಾಜ್ಯಗಳು ಕರ್ನಾಟಕಕ್ಕೆ ೧೧೯೭ ಬಸ್ಸುಗಳನ್ನು ಓಡಿಸುತ್ತಿದೆ.

		ಕರ್ನಾಟಕ ಬೇರೆ ರಾಜ್ಯದಲ್ಲಿ		ಬೇರೆ ರಾಜ್ಯಗಳು ಕರ್ನಾಟಕದಲ್ಲಿ	
		ಮಾರ್ಗಗಳ ಸಂಖ್ಯೆ	ಬಸ್ಸುಗಳು	ಮಾರ್ಗಗಳ ಸಂಖ್ಯೆ	ಬಸು ಗಳು
೧.	ಮಹಾರಾಷ್ಟ್ರ	೨೫೩	೫೦೪	೩೨೪	೬೮೯
೨.	ಆಂಧ್ರಪ್ರದೇಶ	೧೩೨	೨೪೪	೧೫೨	೨೯೦
೩.	ಗೋವಾ	೨೩	೩೦	೨೦	೫೨
೪.	ಕೇರಳ	೧೮	೩೫	೧೪	೩೨
೫.	ತಮಿಳುನಾಡು	೪೮	೯೧	೫೯	೧೩೪
		೪೭೪	೯೦೪	೫೬೯	೧೧೯೭

ಆ) ಹೌದು

ಹುಬ್ಬಳ್ಳಿಯಲ್ಲಿ ಹೊಸ ಬಸ್ ನಿಲ್ದಾಣ ಸ್ಥಾಪನೆ

೧೧೦೦. ಶ್ರೀ ಗೋಪಿನಾಥ್ ಆರ್. ಸಾಂದ್ರ, (ಹುಬ್ಬಳ್ಳಿ-ಗ್ರಾಮೀಣ)—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹುಬ್ಬಳ್ಳಿಯಲ್ಲಿ ಪ್ರಾದೇಶಿಕ ಕಾರ್ಯಾಗಾರದ ಹತ್ತಿರ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಆಯವ್ಯಯದಲ್ಲಿ ೫೦ ಲಕ್ಷ ರೂಗಳನ್ನು ಒದಗಿಸಿರುವುದು ನಿಜವೇ?

ಆ) ಇಲ್ಲವಾದಲ್ಲಿ ಸರ್ಕಾರವು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಇಲ್ಲ.

ಆ) ೧೯೯೦-೯೧ರ ಆಯವ್ಯಯದಲ್ಲಿ ೧೦ ಲಕ್ಷ ರೂಗಳನ್ನು ಅಳವಡಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗ ಸಂಸ್ಥೆಯಲ್ಲಿ ಹರಾಜಿನಿಂದ ಬಂದ ಮೊಬಲಗಿನ ಬಗ್ಗೆ

೧೧೯೩. ಶ್ರೀ ಎಸ್. ಷಫಿ ಅಹಮದ್, (ತುಮಕೂರು).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ.ರಾ.ರ.ಸಾ. ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ಒಟ್ಟು ಸರಕುಗಳು (ಪ್ರತಿಯೊಂದು ಸರಕಿನ ದರ ವಿವರಿಸಬೇಕು)

ಆ) ಮೇಲೆ ಹೇಳಿದ ಸರಕುಗಳ ಸರಬರಾಜುದಾರರು ?

ಇ) ಈ ಸರಬರಾಜುದಾರರು ಅಂಗೀಕರಿಸಿದ ಉದ್ದಿಮೆಗಳೆ?

ಈ) ನಿರುಪಯುಕ್ತ ಬಸ್ಸುಗಳನ್ನು ಹರಾಜು ಮಾಡಿ ಕಳೆದ ಮೂರು ವರ್ಷಗಳಲ್ಲಿ ಬಂದ ಹಣ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಕ.ರಾ.ರ.ಸಾ. ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ಒಟ್ಟು ಸರಕುಗಳ ವಿವರ ಈ ಕೆಳಗಿನಂತಿದೆ.